ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಮತ್ತು ನ್ಯಾಕ್ ನಿಂದ 'ಬಿ' ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440, ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 Email: jsscwk@gmail.com www.jsscwkgl.org

## ವರದಿ

**ಕಸ ನಿರ್ವಹಣೆ ಸಮರ್ಪಕವಾಗಿ ಆಗಬೇಕಿದೆ**

**ಕಸವಿಂಗಡನೆ ಅರಿವು ಕಾರ್ಯಕ್ರಮದಲ್ಲಿ ಶ್ರೀ ಸುರೇಶ್**

ಕೊಳ್ಳೇಗಾಲ: 03-10-2018 ಸ್ವಚ್ಛ ಭಾರತ ಅಭಿಯಾನ ಯಶಸ್ವಿಯಾಗಲು ಕಸ ನಿರ್ವಹಣೆಯು ಸಮರ್ಪಕವಾಗಿಬೇಕಿದ್ದು ಈ ದಿಶೆಯಲ್ಲಿ ಎಲ್ಲರೂ ಕೈ ಜೋಡಿಸಬೇಕಾಗಿದೆ ಎಂದು ನಗರಸಭೆ ಆಯುಕ್ತರಾದ ಶ್ರೀ ಸುರೇಶ ಅಭಿಪ್ರಾಯಿಸಿದರು.

ಇಲ್ಲಿನ ಹೊಸ ಅಣಗಳ್ಳಿ ಗ್ರಾಮದಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಗರಸಭೆ, ಜೆಎಸ್‌ಎಸ್ ಮಹಿಳಾ ಕಾಲೇಜು ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್, ಶ್ರೀ ಮಹದೇಶ್ವರ ಕಾಲೇಜು, ಕೊಳ್ಳೇಗಾಲ ಇವರ ಸಹಯೋಗದಲ್ಲಿ ಗಾಂಧಿಜೀ ಮತ್ತು ಶಾಸ್ತ್ರೀಜಿಯವರ ಜಯಂತಿ ಅಂಗವಾಗಿ ಆಯೋಜಿಸಿದ್ದ ಕಸ ವಿಂಗಡನೆ ಅರಿವು ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ನಮ್ಮ ಮುಂದಿನ ಪೀಳಿಗೆಗಾಗಿ ಶುದ್ಧ ಪರಿಸರ ಉಳಿಸುವ ಜವಾಬ್ದಾರಿ ನಮ್ಮ ಮೇಲಿದೆ ನೀರು, ಗಾಳಿ, ಭೂಮಿಯನ್ನು ಮಾಲಿನ್ಯ ಮುಕ್ತವಾಗಿಸುವ ಸಾಮೂಹಿಕ ಸಂಕಲ್ಪ ಮಾಡಬೇಕಿದ್ದು ಕೈಗಾರಿಕೆಗಳೂ ಈ ದಿಶೆಯಲ್ಲಿ ಪರಿಸರ ಸ್ನೇಹಿ ನೀತಿಗಳನ್ನು ಅಳವಡಿಸಿಕೊಳ್ಳಬೇಕಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ಮಹಿಳಾ ಕಾಲೇಜಿನ ಭೂಗೋಳಶಾಸ್ತ್ರ ಪ್ರಾಧ್ಯಾಪಕಿ ಶ್ರೀಮತಿ ಸ್ಮಿತಾ ಮಾತನಾಡಿ ಪ್ರಸ್ತುತ 21ನೇ ಶತಮಾನದಲ್ಲಿಯೂ ಬಾಪೂಜಿ ಮತ್ತು ಶಾಸ್ತ್ರೀಜಿಯಂಥ ಮಹಾತ್ಮರ ಚಿಂತನೆಗಳು ಅವರ ಕಾಲದಲ್ಲಿದ್ದಷ್ಟೇ ಅಗತ್ಯವೆನಿಸಿವೆಯಲ್ಲದೆ ಜಗತ್ತಿನ ಪ್ರಸ್ತುತ ಹಲವಾರು ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುತ್ತಿವೆ. ಸತ್ಯ ಮತ್ತು ಅಹಿಂಸೆಗಳ ಪರಿಕಲ್ಪನೆಯ ಪ್ರತಿಪಾದಕರಾಗಿ ಬಾಪೂಜಿಯವರಾದರೇ, ಶಾಸ್ತ್ರೀಜಿ ಸರಳತೆಯ ಪ್ರತಿರೂಪ. ಇವರೀವ್ವರ ಜಯಂತಿಯನ್ನು ಒಂದು ಹಳ್ಳಿಯ ಶಾಲೆಯ ಮಕ್ಕಳೊಂದಿಗೆ ಆಚರಿಸುತ್ತಿರುವುದು ಗಾಂಧೀಜಿ ಮತ್ತು ಶಾಸ್ತ್ರೀಜಿಗೆ ನಾವು ತೋರುವ ಗೌರವವನ್ನು ಇಮ್ಮಡಿಗೊಳಿಸುತ್ತದೆ. ಸ್ವಚ್ಛತಾ ಆಂದೋಲನ ಒಂದು ದೀರ್ಘ ಅವಧಿಯ ಆಂದೋಲನವಾಗಿದ್ದು, ಗುರು ಸಾಧಿಸುವವರೆಗೂ ಬದ್ಧತೆಯಿಂದ ಮುಂದುವರಿಯಬೇಕಿದೆ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಶ್ರೀ ಬಸವರಾಜು, ಸ್ಕೌಟ್ಸ್ ಮತ್ತು ಗೈಡ್ಸ್ ಸಂಚಾಲಕಿ ಕು.ತೇಜಶ್ವಿನಿ, ಪರಿಸರವಾದಿ ಶ್ರೀ ಮಹೇಶ್ ಪಟೇಲ್, ಗ್ರಾಮಸ್ಥರು, ಶಿಕ್ಷಕರು ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಕಸವಿಂಗಡೆ ಅರಿವು ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಅಧ್ಯಾಪಕರು ಹಾಗೂ ಸ್ಕೌಟ್ಸ್ ಅಂಡ್ ಗೈಡ್ಸ್ ಸದಸ್ಯರು




ಹೊಸ ಅಣಗಳ್ಳಿ ಗ್ರಾಮದಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗಾಂಧೀಜಿ ಮತ್ತು ಶಾಸ್ತ್ರೀಜಿರವರ ಜಯಂತಿ ಕಾರ್ಯಕ್ರಮ ಚಿತ್ರದಲ್ಲಿ ಕು.ತೇಜಸ್ವಿನಿ, ಶ್ರೀಮತಿ ಸ್ಮಿತಾ, ಪ್ರೊ ಬಸವರಾಜು, ಶ್ರೀ ಸುರೇಶ್, ಆಯುಕ್ತರು, ನಗರಸಭೆ ರವರನ್ನು ಕಾಣಬಹುದು




ಹೊಸ ಅಣಗಳ್ಳಿ ಗ್ರಾಮದಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗಾಂಧೀಜಿ ಮತ್ತು ಶಾಸ್ತ್ರೀಜಿರವರ ಜಯಂತಿ ಕಾರ್ಯಕ್ರಮ ಚಿತ್ರದಲ್ಲಿ ಕು.ತೇಜಸ್ವಿನಿ, ಶ್ರೀಮತಿ ಸ್ಮಿತಾ, ಸ್ಕೌಟ್ಸ್ & ಗೈಡ್ಸ್ ಸದಸ್ಯರು ಹಾಗೂ ಶಾಲೆಯ ವಿದ್ಯಾರ್ಥಿಗಳನ್ನು ಕಾಣಬಹುದು.

